HONNAVAR TALUK

i) 20 tanks
ii) 8 Bandhars
iii) 6 Lift Irrigation Schemes (from Electric pumpsets).

BHATKAL TALUK

i) 9 tanks
ii) 31 Bandhars

(Member Absent)

ಲೋಕೋಪಯೋಗಿ ಇಲಾಖೆಯಲ್ಲಿ ದುಡಿಯುತ್ತಿರುವ ಕೂಲಿಗಾರರಿಗೆ ಬಾಕಿ ಇದ್ದ ಹೆಚ್ಚುವರಿ ಕೂಲಿ ಕೊಡುವ ಬಗ್ಗೆ ಕುರಿತು

ಳಲ್ (೧೨೬೪) ಶ್ರೀ ಎ. ರುಕ್ಮಯ್ಯ ಪೂಜಾರಿ (ಬಂಟ್ವಾಳ).—ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಂಟ್ವಾಳ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯಲ್ಲಿ ದುಡಿಯುತ್ತಿರುವ ಗ್ಯಾಂಗ್‌ಮನ್ ಕೂಲಿಗಾರರಿಗೆ ಹಿಂದಿನ ಹೆಚ್ಚುವರಿ ಸಂಬಳ ಕೊಡಲು ಬಾಕಿ ಉಳಿದಿದೆಯೇ ?

ಆ) ಹಾಗಿದ್ದಲ್ಲಿ ಒಟ್ಟು ಎಷ್ಟು ಹಣ ಕೊಡಬೇಕಾಗಿದೆ ?

ಇ) ಅದನ್ನು ಅವರಿಗೆ ಯಾವಾಗ ಸಂದಾಯ ಮಾಡಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು.).—

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ —ಅಧ್ಯಕ್ಷರೇ, ಮೂಲ ಪ್ರಶ್ನೆ ಇಷ್ಟೆ, ಮಿನಿಮಂ ವೇಜಸ್ ಕೊಡುವ ಬಗ್ಗೆ ಲೇಬರ್ ಕೋರ್ಟಿಗೆ ವ್ಯಾಜ್ಯ ಹೋದುದರ ಪರಿಣಾಮವಾಗಿ ಅವರು ಅವಾರ್ಡ್‌ನ್ನು ಕೊಟ್ಟಿದ್ದಾರೆ. ಇದರಿಂದ ನಾವು ಹೈಕೋರ್ಟಿನ ಮುಂದೆ ಇದರ ಬಗ್ಗೆ ತೀರ್ಮಾನಕ್ಕಾಗಿ ಹಾಕುವ ನಿರ್ಣಯವನ್ನು ಮಾಡಿದ್ದೇವೆ.

ಶ್ರೀ ರುಕ್ಮಯ್ಯ ಪೂಜಾರಿ.—ಬಂಟವಾಳ ತಾಲ್ಲೂಕಿನ ಸುಮಾರು ೪೦ ಜನ ಗ್ಯಾಂಗ್‌ಮೆನ್ ಕೂಲಿಗಳಿಗೆ ಒಬ್ಬೊಬ್ಬರಿಗೆ ೬೦೦ ರೀಂದ ಒಂದೂವರೆ ಸಾವಿರ ರೂಪಾಯಿಗಳವರೆಗೆ ಬಾಕಿ ಕೊಡಲಿಕ್ಕೆ ಇದೆ. ಈಗ ಇದು ಹೈಕೋರ್ಟಿನಲ್ಲಿದೆಯೆಂದು ಹೇಳಿದಿರಿ. ಆದರೆ ನನಗೆ ತಿಳಿದು ಬಂದ ಪ್ರಕಾರವಾಗಿ ಅದು ಹೈಕೋರ್ಟಿನಲ್ಲಿ ತೀರ್ಮಾನವಾಗಿ ಸುಪ್ರೀಂ ಕೋರ್ಟಿಗೆ ಹೋಗಿದೆ. ಬಡವರ ಪರವಾಗಿ ಮಾತನಾಡತಕ್ಕ ಈ ಸರ್ಕಾರ ಕಡು ಬಡವರಾಗಿರತಕ್ಕವರಿಗೆ ಕೊಡಬೇಕಾದ ಹಣವನ್ನು ಕೂಡಲೇ ಕೊಡಿಸುವ ಬಗ್ಗೆ ವ್ಯವಸ್ಥೆ ಮಾಡುತ್ತಿರಾ ?

ಶ್ರೀ ಎಚ್. ಡಿ. ದೇವೇಗೌಡ.—ಗ್ಯಾಂಗ್‌ಮನ್ ರವರಿಗೆ ಕೊಡತಕ್ಕ ವೇತನ. ದಿನಗೂಲಿ. ಒಂದೊಂದು ಭಾಗದಲ್ಲಿ ಒಂದೊಂದು ಪರಿಸ್ಥಿತಿ ಇದೆ. ಹೈದರಾಬಾದ್ ಕರ್ನಾಟಕದಲ್ಲಿ ಒಂದು ರೀತಿ ಯಾಗಿದೆ. ಸೌತ್ ಕೆನರಾ ಭಾಗದಲ್ಲಿ ಒಂದು ರೀತಿ ಯಾಗಿದೆ ೧೯೭೪ ರಿಂದ ೭೯ರವರೆಗೆ ನಡೆದಂಥ ಅವ್ಯವಹಾರದಿಂದ ಮಿನಿಮಂ ವೇಜಸ್ ಮತ್ತು ಪೆಡ್ಯೂಲ್ ರೇಟ್‌ನ ಬಗ್ಗೆ ಲೇಬರ್ ಕೋರ್ಟಿಗೆ ತೆಗೆದುಕೊಂಡು ಹೋದರು. ಸುಮಾರು ೩೭ ಸಾವಿರ ರೂಪಾಯಿಗಳ ಅವಾರ್ಡ್‌ನ್ನು ಅವರು ಪಾಸ್

ಮಾಡಿದ್ದಾರೆ. ಸುಮಾರು ೪೦-೫೦ ಜನಕ್ಕೆ ನಾವು ಇದನ್ನು ಒಪ್ಪಿಕೊಳ್ಳುವುದಾದರೆ ಇಡೀ ರಾಜ್ಯ ದ್ಯಂತ ಇರತಕ್ಕ ಗ್ಯಾಂಗ್‌ಮನ್ ಕೂಲಿಗಳಿಗೂ ಇದು ಆನ್ವಯವಾದರೆ ಫೈನಾನ್ಷಿಯಲ್ ಇಂಪ್ಲಿಕೇಷನ್ ಹೆಚ್ಚಾಗುತ್ತದೆ. ಆ ಕಾರಣದಿಂದ ಇದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೈಕೋರ್ಟಿಗೆ ರಿಟ್ ಹೋಗಿದೆ. ಅಲ್ಲಿ ತೀರ್ಮಾನವಾಯಿತೋ ಇಲ್ಲವೋ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರು ಅಲ್ಲಿ ಸಹ ತೀರ್ಮಾನವಾಗಿ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕುತ್ತಿದ್ದೇವೆಂದು ಹೇಳಿದರು. ಈ ಮಾಹಿತಿ ಅವರಿಗೆ ಹೇಗೆ ಸಿಕ್ಕಿತೋ ನನಗಂತೂ ಗೊತ್ತಿಲ್ಲ. ನನಗೆ ಗೊತ್ತಿರತಕ್ಕ ಮಾಹಿತಿ ಪ್ರಕಾರವಾಗಿ ಹೈಕೋರ್ಟಿನಲ್ಲಿ ಕೇಸ್ ಹಾಕಿ ತೀರ್ಮಾನ ಮಾಡಿದ್ದೇವೆ ಅಷ್ಟೆ.

ಕಾರಂಜಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುವ ಕುರಿತು

೪೮೭ (೧೧೪೬) ಶ್ರೀ ನಾರಾಯಣರಾವ್‌ಮನಳ್ಳಿ (ಬೀದರ್).—ಮಾನ್ಯ ಲೋಕೋಪಯೋಗಿ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಾರಂಜಿ ನದಿಗೆ ಅಡ್ಡಲಾಗಿ ಬಿದರೆ ಚಿಂಚೋಳಿ-ಮನಹಳ್ಳಿ ಮಾರ್ಗದಲ್ಲಿ ಬಂಗೂರ್‌ಹಳ್ಳಿ ಹತ್ತಿರ ಸೇತುವೆ ನಿರ್ಮಿಸಲು ಸರ್ಕಾರದ ಹತ್ತಿರ ಯೋಜನೆ ಇದೆಯೇ ?

ಆ) ಹಾಗಿದ್ದಲ್ಲಿ ಕೆಲಸ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಕೆಲಸವು ೮೪-೮೫ರ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸೇರಿದೆ.

ಆ) ಕೆಲಸದ ಅಂದಾಜಿಗೆ ಮಂಜೂರಾತಿಯನ್ನು ಕೊಟ್ಟಮೇಲೆ ಕೆಲಸವನ್ನು ಪ್ರಾರಂಭಿಸ ಲಾಗುವುದು.

ಕಾರಂಜಿ ರಿವರ್ ಮೇಲೆ ಸೇತುವೆಯನ್ನು ಕಟ್ಟಬೇಕು ಎನ್ನುವ ಬಗ್ಗೆ ಹಿಂದಿನ ಮುಖ್ಯ ಮಂತ್ರಿ ಗಳವರು ಅಲ್ಲಿಗೆ ಭೆಟಿ ಕೊಟ್ಟಿದ್ದಾಗ ಸೂಚನೆಕೊಟ್ಟು ಬಂದಿದ್ದರು. ಆದರೆ ಆವರ ಬಗ್ಗೆ ೧೯೮೨-೮೩ರ ಬಜೆಟ್‌ನಲ್ಲಿ ಅವರು ಹಣವನ್ನು ಇಟ್ಟಿರಲಿಲ್ಲ. ಆ ಕಾರಣದಿಂದ ಆ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಆದುದರಿಂದ ನಾವು ಈಗ ೧೯೮೪-೮೫ರಲ್ಲಿ ೧೨ ಲಕ್ಷರೂಪಾಯಿಗಳ ಅಂದಾಜು ಮಾಡಿ, ಈ ಸೇತುವೆಯನ್ನು ಕಟ್ಟುವುದಕ್ಕೆ ೧ ಸಾವಿರ ರೂಪಾಯಿಗಳನ್ನು ಟೋಕನ್ ಗ್ರಾಂಟನ್ನು ಸೇರಿಸಿದ್ದೇವೆ. ನಮಗೆ ಸಂಪನ್ಮೂಲಗಳ ಕೊರತೆ ಇದೆಯೆಂದು ಮೊದಲೇ ಹೇಳಿದ್ದೇನೆ. ನಮಗೆ ಹೆಚ್ಚಿಗೆ ಹಣ ಸಿಕ್ಕುವುದಾದರೆ ಈ ಕೆಲಸವನ್ನು ತಕ್ಷಣವೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಮಾನ್ಯ ಉಪಾಧ್ಯಕ್ಷರೆ, ಬಜೆಟ್‌ನಲ್ಲಿ ಕಾಣಿಸಿದ ಪ್ರಕಾರ ಇದಕ್ಕೆ ೧೨ ಲಕ್ಷ ಇಟ್ಟಿದ್ದಾರೆ. ಆದರೆ ಎಸ್ಟಿಮೇಟ್ ೧೬ ಲಕ್ಷ ಆಗಿದೆ. ಇದರ ಸಲುವಾಗಿ ಏನು ಹೇಳುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಎಸ್ಟಿಮೇಟ್ ಹೆಚ್ಚಾಗಿದೆಯೆಂದು ಹೇಳುತ್ತಾ ಇದ್ದಾರೆ. ಅವರು ಏನು ಕೊಟ್ಟಿದ್ದಾರೆ ಅದರ ಮೇಲೆಯೇ ನಾವು ಸೇರಿಸಿದ್ದೇವೆ ಅದು ಏನೇ ಇರಲಿ, ನಮಗೆ ಸ್ವಲ್ಪ ಹಣ ಸಿಕ್ಕಿದರೆ ಈ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಹಿಪ್ಪರಗಿ ಯೋಜನೆ

೪೮೮ (೧೨೫೨) ಶ್ರೀ ಎಂ.ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಿಪ್ಪರಗಿ ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ಮತ್ತು ಅಂದಾಜು ವೆಚ್ಚವೆಷ್ಟು ?

ಆ) ಮೇಲ್ಕಂಡ ಯೋಜನೆಗೆ ಈವರೆಗೆ ಮಾಡಿದ ವೆಚ್ಚವೆಷ್ಟು? ಹಾಗೂ ಅದರ ರೂಪುರೇಷೆ ಗಳೇನು ?